1	2	3	4	
	Breweries			
14.	M/s United Breweries Ltd., Bangalore	Beer	99,71, 266	Bulk litres
15.	M/s Mysore Breweries Ltd., Bangalore	Beer	28,99,203	,,
16.	M/s Venus Breweries, Bangalore	Beer	94,238	,,
17.	M/s Khoday Brewing and Distilling Industry (P) Ltd., Bangalore.	Beer	27,25,749	,,
18.	M/s Amalgamated Wineries, Mysore	Wine	6,693	,,
		Total ...	1,56,97,149	

ಶ್ರೀ ಪೆಚ್. ಗಂಗಾಧರನ್. ಸ್ವಾಮಿ, ತಾವು ಕೊಟ್ಟಿರುವ ಪಟ್ಟಿಯಲ್ಲಿರುವ ೧೮ ಕಂಪೆನಿಗಳ ಪೈಕಿ ಕರ್ನಾಟಕದವರವು ಎಷ್ಟು, ಕರ್ನಾಟಕೇತರರವು ಎಷ್ಟು ? ಮತ್ತು ಇದಕ್ಕೆ ಹಾಕಿರುವ ಬಂಡವಾಳ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಇಲ್ಲಿ ಕರ್ನಾಟಕದವರವುಗಳು ಎಷ್ಟು, ವಿದೇಶಗಳವರದ್ದು ಎಷ್ಟು ಎಂಬ ಬಗ್ಗೆ ವಿವರ ಈಗ ನನ್ನಲ್ಲಿಲ್ಲ, ತಮಗೆ ಬೇಕಾದರೆ ಅದನ್ನು ಒದಗಿಸುತ್ತೇನೆ.

ಶ್ರೀ ಪೆಚ್. ಗಂಗಾಧರನ್.—ಪ್ರತಿಯೊಂದು ಕಂಪೆನಿಯಲ್ಲೂ ಎಷ್ಟೆಷ್ಟು ಉತ್ಪತ್ತಿಯಾಗುತ್ತದೆಂದು ತಿಳಿದುಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿಕೊಂಡಿದ್ದೀರಾ ?

ಶ್ರೀ ಆರ್. ಎಸ್. ಪಾಟೀಲ್.—ನಮ್ಮ ಅಧಿಕಾರಿಗಳನ್ನು ಅಲ್ಲಿ ನೇಮಿಸಿರುತ್ತೇವೆ, ಅಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎಂಬ ವಿವರವನ್ನು ಅವರು ಒದಗಿಸುತ್ತಾರೆ.

ಶ್ರೀ ಪೆಚ್. ಗಂಗಾಧರನ್ —ಸ್ವಾಮಿ, ಈ ಕಂಪೆನಿಗಳಲ್ಲಿ ಅನೇಕವು ಸರ್ಕಾರಕ್ಕೆ ತಾವು ಕೊಡಬೇಕಾದ ತೆರಿಗೆಯನ್ನು ಕೊಡದೆ ತಪ್ಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಸ್. ಪಾಟೀಲ್.—ಅಂಥ ಪ್ರಕರಣಗಳು ಯಾವುವೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥಾದ್ದು ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Payment of wages to Ugranis

625 M. VEERAPPA MOILY (Karkal)—Will the Minister for Revenue be pleased to state :—

(*a*) whether the Ugranis attached to the Village Accountants and Village Panchayats are considered as Government Servants or Bounded Labourers to Government ;

(*b*) if they are considered as Government Servants, how a meagre salary of Rs. 27 per month is paid to them for full time work ;

(*c*) will the Government consider payment of living wage to them ?

SRI B. BASAVALINGAPPA (Minister for Revenue)--

(*a*) The Ugranis are not Bonded Labourers. The appointment of Minor village servants were being made on hereditary basis. All the hereditary posts of Village Officers stood abolished with effect from 1st February 1963 as per Karnataka Village Offices Abolition Act, 1961. The minor village servants were, however,continued from time to time on an ad-hoc basis and without hereditary rights on the same terms and conditions as regards remuneration as before. At present they have been continued upto 31st December 1978.

(*b*) Minor Village Servants are called by different names in different areas. They are called Ugranis, Sethsanadis, Walikars, Mahars, Barkers, Talwaries, etc, and they are paid remuneration on different scales which vary widely, ranging from Rs, 3 to Rs. 63 P.M. Though the remuneration is low in some Districts, this problem cannot be tackled on piece-meal basis.

(*c*) Government have recently decided to propose an amendment to the Karnataka Land Revenue Act,1964, which would provide for the appointment of "Gramasahayakas" in place of Minor Village Servants. After the proposed Amendment is enacted, Rules will be framed prescribing the terms and conditions and the remuneration to be paid to these persons.

ಶ್ರೀ ವೀರಪ್ಪ ಮೊಯಿಲಿ.— ಗ್ರಾಮಗಳಲ್ಲಿ ಕಂದಾಯದ ನೋಟೀಸ್ ಮತ್ತು ಭೂ ನ್ಯಾಯ ಮಂಡಲಿಗಳ ನೋಟೀಸ್‌ಗಳನ್ನು ಉಗ್ರಾಣಿಗಳು, ತಳವಾರಿಗಳು ಹಂಚುತ್ತಿದ್ದಾರೆ ಮತ್ತು ಅವರು ಪುಲ್ ಟೈಂ ಕೆಲಸಮಾಡುತ್ತಿದ್ದರೂ ಅವರಿಗೆ ಸಂಭಾವನೆಯನ್ನು ಕಡಿಮೆ ಕೊಡುತ್ತಿದ್ದೀರಿ. ಇದರ ಬಗ್ಗೆ ಮಸೂದೆಯನ್ನು ಸಭೆಯಲ್ಲಿ ಮಂಡಿಸುವಾಗ ವಿಚಾರವನ್ನು ಪರಿಶೀಲನೆ ಮಾಡುತ್ತೀರಾ ? ಮತ್ತು ಗ್ರಾಮಗಳಿಗೆ ಈ ನೌಕರರೇ ಆಧಾರವೆಂದು ಹೇಳುವಂತಹ ಈ ಸಮಯದಲ್ಲಿ ಇವರನ್ನು ನಾಲ್ಕನೇ ದರ್ಜೆಯ ನೌಕರರೆಂದು ಪರಿಗಣಿಸುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.— ಈ ಹುದ್ದೆಗಳು ಏನಿವೆ ಇವು ಅನುವಂಶೀಕವಾಗಿ ಬಂದಂಥವುಗಳಾಗಿವೆ. ವಿವಿಧ ಪ್ರದೇಶಗಳಲ್ಲಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಅಂದರೆ, ಉಗ್ರಾಣಿಗಳು, ಸೇತ್ ಸನಾದಿಗಳು, ವಾಲೀಕಾರರು, ಮಹಾರರು, ಬಾರ್‌ಕರ್‌ರು, ತಳವಾರಿಗಳು ಹೀಗೆ ಕರೆಯುತ್ತಾರೆ. ಇವರಿಗೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ರೆಮ್ಯುನರೇಷನ್ ಕೊಡಲಾಗುತ್ತಿದೆ. ಇದಕ್ಕೆ ನಾವು ಸಂಬಳ ಎಂದು ಹೇಳುವುದಿಲ್ಲ. ಇದು ಸಂಭಾವನೆ ಮಾತ್ರ. ಕೆಲವು ಭಾಗದಲ್ಲಿ ಅಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ತಿಂಗಳಿಗೆ ೬೩ ರೂಪಾಯಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೨ ರೂಪಾಯಿ ಬಳ್ಳಾರಿ ಮತ್ತಿತರ ಭಾಗಗಳಲ್ಲಿ ತಿಂಗಳಿಗೆ ೨೦ ರೂಪಾಯಿ ಕೊಡುತ್ತಿದ್ದಾರೆ. ಬೊಂಬಾಯಿ ಕರ್ನಾಟಕದಲ್ಲಿ ವರ್ಷಕ್ಕೆ ೧೪೪ ರೂಪಾಯಿ, ಹೈದರಾಬಾದ್ ಕರ್ನಾಟಕದಲ್ಲಿ ವರ್ಷಕ್ಕೆ ೭೨ ರೂಪಾಯಿ ಕೊಡಗಿನಲ್ಲಿ ತಿಂಗಳಿಗೆ ೩೦ ರೂಪಾಯಿ ಹೀಗೆ ಸಂಭಾವನೆಯನ್ನು ಕೊಡಲಾಗುತ್ತಿದೆ; ಮತ್ತು ಈ ಸಂಭಾವನೆ ಕೊಡುತ್ತಿರುವುದು ಕಡಿಮೆ ಎಂಬ ಅಂಶ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದರೂ ಅವರಿಗೆ ಸಂಬಳ ಕೊಡತಕ್ಕ ವ್ಯವಸ್ಥೆ ಮಾಡುವುದೂ ಸರಿಯಲ್ಲ ಎಂಬುದು ನಮ್ಮ ಗಮನದಲ್ಲಿದೆ. ಅವರನ್ನು ಕ್ಲಾಸ್ ೪ ಸರ್ವೆಂಟ್ಸ್ ಆಗಿ ಕನ್‌ವರ್ಟ್ ಮಾಡಬೇಕೆಂದರೆ ಯಾರನ್ನು ಮಾಡಬೇಕು ಎಂಬುದು ಪ್ರಶ್ನೆ ಬರುತ್ತದೆ. ಇದು ಮೊದಲು ಅನುವಂಶಿಕ ಹುದ್ದೆಗಳಾಗಿದ್ದು ೧-೨-೧೯೬೩ ರಿಂದ ಗ್ರಾಮಾಧಿಕಾರಿಗಳ ಎಲ್ಲ ಅನುವಂಶಿಕ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಅವರನ್ನು ಯಾವರೀತಿಯಾಗಿ ಗ್ರಾಮಗಳಲ್ಲಿ ಉಪಯೋಗಿಸಿಕೊಳ್ಳಬೇಕು ಎಂಬ ಬಗ್ಗೆ ಸರ್ಕಾರ ತೀವ್ರ ಗಮನಹರಿಸಿದೆ. ಅವರನ್ನು ಗ್ರಾಮ ಸಹಾಯಕ್ಸ್

ಎಂದು ಮಾಡಿ ರೆವಿನ್ಯೂ ಅಧಿಕಾರಿಗಳಿಗೆ ಸಹಾಯ ಮಾಡಬೇಕು, ಅವರಿಗೆ ಒಂದು ಸರಿಯಾದ ಸಂಭಾವನೆ ನಿಗದಿ ಮಾಡಬೇಕು ಎಂಬುದು ಸರ್ಕಾರದ ಗಮನದಲ್ಲಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಸಮಗ್ರವಾಗಿ ಬದಲಾವಣೆ ಮಾಡಿ ಗ್ರಾಮ ಸಹಾಯಕರಿಗೆಲ್ಲರಿಗೂ ಒಂದೇ ಹೆಸರು ಕೊಟ್ಟು ಅವರು ಜೀವನ ಮಾಡುವುದಕ್ಕೆ ಆಗುವಂತೆ ಸಂಭಾವನೆಯನ್ನು ಕೊಡತಕ್ಕ ಆಲೋಚನೆ ಸರ್ಕಾರಕ್ಕಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.-- ಸ್ವಾಮಿ, ತಾವು ಅವರನ್ನು ಖಾಯಂ ಗ್ರಾಮಸಹಾಯಕರನ್ನಾಗಿ ಮಾಡುವುದಕ್ಕೆ ಕಷ್ಟವಾದೀತು ಎಂಬ ಶಂಕೆಯನ್ನು ತಾವು ವ್ಯಕ್ತಪಡಿಸಿದ್ದೀರಿ. ತಾವು ಕರ್ನಾಟಕದ ಅನೇಕ ಕಡೆಗಳಲ್ಲಿ ಸರಿಯಾದ ಮಾಹಿತಿ ಸಂಗ್ರಹಿಸಿ ಅವರು ಯಾವರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡಿ ಅದನ್ನು ಸಂಪೂರ್ಣವಾಗಿ ಪರಿಗಣನೆ ಮಾಡಿದಾಗ ಸ್ವಾತಂತ್ರ್ಯ ಸಿಕ್ಕಿ ೩೦ ವರ್ಷವಾದರೂ ಅವರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಬೇಕಾಗಿದೆ. ಇಂಥ ಅನ್ಯಾಯವನ್ನು ಸರ್ಕಾರದವರು ಇಗಲಾದರೂ ಸರಿಪಡಿಸದೇ ಇದ್ದರೆ ಬಹಳ ಕಷ್ಟವಾಗುತ್ತದೆ. ತಾತ್ಕಾಲಿಕವಾಗಿಯಾದರೂ ತಕ್ಷಣ ಈ ಬಗ್ಗೆ ಪರಿಶೀಲನೆ ಮಾಡಿ ಸರಿ ಮಾಡಬೇಕು ಎಂದು ಹೇಳುತ್ತಿದ್ದೇನೆ; ಮುಂದೆ ಅವರಿಗೆ ಪೆನ್‌ಷನ್ ಕೊಡುವ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.- ಮಾನ್ಯ ಸದಸ್ಯರು ಏನು ಕಳಕಳಿಯಿಂದ ಅವರ ಬಗ್ಗೆ ಭಾವನೆ ವ್ಯಕ್ತಮಾಡಿದ್ದಾರೆ ಅದರಲ್ಲಿ ನಾನೂ ಕೂಡ ಸಮ ಭಾಗಿಯಾಗಿದ್ದೇನೆ. ಸರ್ಕಾರದವರು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಸಂಬಂಧಪಟ್ಟ ಆಕ್ಟಿಗೆ ಸಮಗ್ರವಾದ ತಿದ್ದುಪಡಿಯನ್ನು ತಂದಿದ್ದೇವೆ. ಯಾರು ಯಾರು ಬೇರೆ ಬೇರೆ ಕಾರಣಗಳಿಂದ ಜಮೀನುಗಳನ್ನು ಕಳೆದು ಕೊಂಡಿದ್ದಾರೆ ಅಂಥವರಿಗೆ ಜಮೀನು ಕೊಡಿಸುವ ವ್ಯವಸ್ಥೆ ಮಾಡಬೇಕು ಎಂದು ಮಾಡುತ್ತಿದ್ದೇವೆ. ಅವರು ಅನುಪಯೋಗಿಯೂ ನೌಕರರಾಗಿದ್ದರೂ ಅವರ ಕಷ್ಟವೇನು, ಮೊದಲು ಅವರು ಹೇಗಿದ್ದರು, ಹೇಗೆ ಕಷ್ಟಪಡುತ್ತಿದ್ದರು, ಈಗ ಯಾವರೀತಿ ಕಷ್ಟಪಡುತ್ತಿದ್ದಾರೆ ಎಂಬುದನ್ನೆಲ್ಲಾ ಮನವರಿಕೆ ಮಾಡಿಕೊಂಡು ಅವರ ಸ್ಥಿತಿಗತಿಗಳನ್ನು ಸುಧಾರಿಸಬೇಕು ಎಂದು ಮನಸ್ಸು ಮಾಡಿದ್ದೇವೆ. ಆ ಬಗ್ಗೆ ಶೀಘ್ರದಲ್ಲೇ ಕಾನೂನನ್ನು ಮಾಡುತ್ತೇವೆ ಮತ್ತು ಅವರಿಗೆ ಸಹಾಯ ಮಾಡತಕ್ಕ ವ್ಯವಸ್ಥೆಯನ್ನೂ ಕೂಡ ಮಾಡುತ್ತೇವೆ.

ಶ್ರೀ ಜಿ. ಬಿ. ಶಂಕರರಾವ್.— ಮಾನ್ಯ ಕಂದಾಯಮಂತ್ರಿಗಳು ಗ್ರಾಮಸಹಾಯಕರ ವಿಚಾರದಲ್ಲಿ ಬಹಳ ತೀವ್ರವಾದ ಅನುಕಂಪವನ್ನು ವ್ಯಕ್ತ ಮಾಡಿದ್ದಾರೆ. ಗ್ರಾಮಾಂತರ ಮಟ್ಟದಲ್ಲಿ ಅವರ ಸೇವೆ ಎಷ್ಟು ಗಹನವಾದುದು ಎಂಬುದನ್ನು ಅರಿತುಕೊಂಡೂ ಅವರ ಜೀವನಕ್ಕೆ ತುಂಬಾ ಕಷ್ಟವಿರುವ ಕಾಲದಲ್ಲಿ ಇನ್ನೂ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ ಭಾವನಾಲ್ಲೋಕದಲ್ಲೇ ವ್ಯವಹರಿಸುತ್ತಿದ್ದೀರಿ. ಅವರಿಗೆ ಯಾವಾಗ ಅನುಕೂಲವನ್ನು ಮಾಡಿಕೊಡುತ್ತೀರಿ ? ನಿಮ್ಮ ಅವಧಿಯಲ್ಲೇ ಮಾಡಿಕೊಡುತ್ತಿರೋ ಅಥವಾ ಇನ್ನೂ ಎಷ್ಟು ಕಾಲಾವಧಿ ಬೇಕು ? ಅವರ ಕಷ್ಟ ಏನು ಎಂಬುದು ಪ್ರತ್ಯಕ್ಷವಾಗಿ ನೋಡಿ ತಿಳಿದು ಕೊಂಡಿರುವವರಿಗೆ ಮಾತ್ರ ಅರ್ಥವಾಗುತ್ತದೆ. ಅವರ ಅನುವಂಶಿಕವಾದ ಹಕ್ಕನ್ನು ನೀವು ಕಸಿದುಕೊಂಡಿದ್ದೀರಿ. ಅವರನ್ನು ಬೇರೆ ಹೆಸರಿನಿಂದ ಕರೆದು ತಕ್ಕ ಸಂಭಾವನೆಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಅವರು ಎಲ್ಲರಂತೆ ಮನುಷ್ಯರಾಗಿ ಬದುಕುವುದಕ್ಕೆ ತಕ್ಷಣವೇ ಕ್ರಮ ತೆಗೆದು ಕೊಳ್ಳುತ್ತೀರಾ ? ಎಷ್ಟು ಕಾಲದಲ್ಲಿ ಅವರಿಗೆ ಅನುಕೂಲವನ್ನು ಮಾಡಿಕೊಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ನನ್ನ ತೀವ್ರತೆಯ ಬಗ್ಗೆ ಮಾನ್ಯ ಸದಸ್ಯರು ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ನನ್ನ ತೀವ್ರತೆಯ ಬಗ್ಗೆ ಮಾನ್ಯ ಸದಸ್ಯರಿಗೆ ಶಂಕೆಯಿಲ್ಲವೆಂದು ಕಾಣುತ್ತದೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನನ್ನ ತೀವ್ರತೆಯ ಬಗ್ಗೆ ಯಾರೂ ಶಂಕೆ ಇಟ್ಟುಕೊಳ್ಳಬೇಡಿ. ಅವರಿಗೆ ಅನ್ಯಾಯವಾಗಿದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆಯೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸದನದ ಮುಂದೆ ತಿದ್ದುಪಡಿ ಮಸೂದೆ ಇದೆ. ಇದಕ್ಕೆ ಸಭೆ ಜಾಗ್ರತೆಯಾಗಿ ಒಪ್ಪಿಗೆಯನ್ನು ಕೊಟ್ಟರೆ ಜಾಗ್ರತೆಯಾಗಿ ಅನುಷ್ಠಾನಕ್ಕೆ ತರುತ್ತೇವೆ. ಅವರ ಸೇವೆಯನ್ನು ಉಪಯೋಗಿಸಿ ಕೊಳ್ಳುವ ಬಗ್ಗೆ ಯೋಜನೆ ಮಾಡಿದ್ದೇವೆ, ಆ ಬಗ್ಗೆ ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಅವರಿಗೆಲ್ಲಾ ಒಂದೇ ಹೆಸರಿನಿಂದ ಕರೆಯಬೇಕು ಎಂಬ ಉದ್ದೇಶದಿಂದ ಗ್ರಾಮ ಸಹಾಯಕ್ಸ್ ಎಂದು ಮಾಡಬೇಕೆಂದಿದ್ದು ಶೀಘ್ರದಲ್ಲೇ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯೆಂಕಟಪ್ಪ.— ಸ್ವಾಮಿ. ಅವರಿಗೆ ಜಮೀನುಗಳನ್ನು ವಾಪಸ್ ಕೊಡುವುದರ ಬಗ್ಗೆ ಕಾನೂನು ಮಾಡಬೇಕೆಂದು ತಾವು ಮಾಡಿದ್ದೀವೆಂದು ಹೇಳಿದ್ದೀರಿ. ಯಾವ ಅವಧಿಯಿಂದ ಅದನ್ನು ಮಾಡುತ್ತೀರಿ ? ಸಾಕಷ್ಟು ಹಿಂದಿನಿಂದಲೂ ಭೂಮಿಯನ್ನು ಕಳೆದುಕೊಂಡಿರುವವರಿಗೆ, ವಾಪಸ್ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿ ಕೊಳ್ಳುವುದಿಷ್ಟೆ. ಈ ಸದನದ ಮುಂದೆ ಬಿಲ್ ಇದೆ. ದಯವಿಟ್ಟು ಅದನ್ನು ಓದಿ.

Fragmentation Act

506. SRI K. H. RAMAKRISHNAIAH (Turvekere).— Will the Minister for Revenue be pleased to state.—

whether it is under the consideration of the Government to exempt the ryots with one gunta land from the provisions of fragmentation Act. for construction of House ?

SRI B BASAVALINGAPPA (Minister for Revenue).— As per present law there is a provision for ryot to construct the house who have got one gunta land.

ಶ್ರೀ ಕೆ. ಎಚ್. ರಾಮಕೃಷ್ಣಯ್ಯ.— ಸ್ವಾಮಿ, ಇಲ್ಲಿ ತಾವು ಕೊಟ್ಟಿರತಕ್ಕ ಉತ್ತರ ಸರಿಯಾಗಿಲ್ಲ. ಎಷ್ಟೋ ಜನ ಬಡವರು ಒಂದು ಗುಂಟೆ ಜಮೀನನ್ನು ಕೊಂಡುಕೊಂಡು ಮನೆ ಕಟ್ಟಿಕೊಳ್ಳುವುದಕ್ಕೆ ಪರ್ಮಿಷನ್‌ಗೆ ಹಾಕಿದಾಗ ಫ್ರಾಗ್ಮೆಂಟೇಷನ್ ಆಕ್ಟಿಗೆ ಒಳಪಡದೇ ಅಲಯನಿಯೇಷನ್ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ, ಇದರಿಂದ ಬಡಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಒಂದು ಗುಂಟೆ ಭೂಮಿಯನ್ನು ಯಾರು ಬಡಜನರು ಕೊಂಡುಕೊಳ್ಳುತ್ತಾರೆ ಅವರಿಗೆ ಈ ಫ್ರಾಗ್ಮೆಂಟೇಷನ್ ಆಕ್ಟ್‌ನಿಂದ ಸಂಪೂರ್ಣ ವಿನಾಯಿತಿಯನ್ನು ಕೊಡುವಂತೆ ಆಜ್ಞೆ ಮಾಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೊಸಬರು. ಈ ಕಾನೂನು ಚೆನ್ನಾಗಿ ಓದಿ ಪ್ರಶ್ನೆ ಕೇಳಿದ್ದರೆ ಚೆನ್ನಾಗಿತ್ತು. Prevention of Fragmentation and Consolidation of holdings Act Section 9 ಪ್ರಕಾರವಾಗಿ ಇಂಥ ಒಂದು ತೀರ್ಮಾನವನ್ನು ಕೊಡುವುದಕ್ಕೆ ಡೆಪ್ಯುಟಿ ಕಮಿಷನರ್‌ಗೆ ಅಧಿಕಾರ ಉಂಟು. ಇದು ಅವರ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಅವರಿಗೆ ಅರ್ಜಿ ಕಳಿಸಿದರೆ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಗುಂಟೆ ಭೂಮಿ ಇರುವ ರೈತನಿಗೆ ಅವಕಾಶವಿದೆ.

Budget Provision for Road work in Shimoga District.

20. SRI G. BASAVANNAPPA (Holehonnur).—Will the Minister for Public Works be pleased to state :—

(*a*) amount provided in the budget provision during the year, 1977–78 for Road works in Shimoga District (Talukwise) ;

(*b*) the total amount spent upto the end of March 1978 ;

(*c*) amount provided in the budget during the year 1978–79; for the road works in Shimoga District (Taluk-wise) ?